ನಗರ ಗುರುದೇವ್ ಭಂಡಾರ್ಕರ್, ಹೊಸನಗರ

◆ ಕಂಠಮಟ್ಟ ಬಿಗಿವ 'ಟೈ'ಗೂ, ಕಂಠಪೂರ್ತಿ ಕುಡಿದಾಗಿನ 'ಟೈಟ್'ಗೂ ವ್ಯತ್ಯಾಸವೇನು?



ಟೈ ಕಟ್ಟಿದವರನ್ನು ಎಳೆದೊಯ್ಯುವುದು ಸುಲಭ.

ಪಂಡಿತರಾವ ಪಾಟೀಲ, ಸರಸಂಬಾ

◆ ಬ್ಯೂಟಿ ಪಾರ್ಲರಿಗೆ ಹೋಗುವ ಕನ್ಯಾಮಣಿಗಳು ನಿಸರ್ಗದತ್ತ ಪುರುಷರನ್ನೇ ಇಷ್ಟಪಡುತ್ತಾರೆ. ಏಕೆ?

ನೈಸರ್ಗಿಕ ವಸ್ತುಗಳದು ಅಡ್ಡ ಪರಿಣಾಮ ಇರುವುದಿಲ್ಲವಾದ್ದರಿಂದ.

ಹೆಚ್.ಕೆ. ವಿಜಯಕುಮಾರ್, ರಾಯಚೂರು

◆ ಮಾಲುಗಳಲ್ಲಿ ಮಾಲುಗಳ ದರ ಏಕೆ ಕಡಿಮೆ ತೋರಿಸುತ್ತಾರೆ?

ಫಿಶಿಂಗ್ ಟೆಕ್ನಿಕ್; ಗಾಳಕ್ಕೆ ಹುಳು ಸಿಕ್ಕಿಸಿ ಬಲೆ ಬೀಸಿದರೆ ಅಷ್ಟು ದೊಡ್ಡ ತಿಮಿಂಗಿಲ ಬಲೆಗೆ!

ಉಷಾ ವೆಂಕಟೇಶ್ ಮಹಾಲೆ, ಹಳಿಯಾಳ

◆ ಶಾಲೆಯ ಬಸ್ಸುಗಳ ಬಣ್ಣ ಹಳದಿ. ಏಕೆ?




ಶಾಲೆಗಳಿಗಂಟಿರುವ ಕಾಸಿನ ಕಾಮಾಲೆಯ ಪ್ರಭಾವವಂತೆ.

ಮುರಲೀಧರ ಕುಲಕರ್ಣಿ, ಬೀದರ್

◆ ಅಪ್ಪ, ಮಗ, ಸೊಸೆ, ಮೊಮ್ಮಗ ಚುನಾವಣೆ ಸ್ಪರ್ಧಿಸಿದರೂ ಕುಟುಂಬ ರಾಜಕಾರಣವಲ್ಲವೆಂದರೆ ಅದರ ವ್ಯಾಖ್ಯೆಯಾದರೂ ಏನು?

ಡೆಮಾಕ್ರೆಸಿಯ ತತ್ವಗಳನ್ನು ಕುಟ್ಟಿ, ಸಿಕ್ಕೆಲ್ಲವನ್ನೂ ಉಂಬ ರಾಜಕಾರಣವೇ ಕುಟ್ಟುಂಬ (ಕುಟುಂಬ) ರಾಜಕಾರಣ.

ಕಣ್ಣೂರು ಗೋವಿಂದಾಚಾರಿ, ಮೈಸೂರು

◆ ಹೊಸದಾಗಿ ಬಂದ ಸೊಸೆ ಹಾಲುಕ್ಕಿಸಿದರೆ ಸಂಭ್ರಮಿಸುವವರು, ನಂತರದ ದಿನಗಳಲ್ಲಿ ಹಾಲುಕ್ಕಿಸಿದರೆ ರೇಗುವುದೇಕೆ?

ಕಂದನ ಅಳುವಿನಂತೆಯೇ ಇದು; ಮೊದಲ ಶ್ರೀಕು (shriek), ಮೊದಲ ಉಕ್ಕು ಚಂದ. ನಂತರದ್ದೆಲ್ಲ ರಗಳೆ.

ಪಿ. ಚಿದಾನಂದ, ಜವನಗೊಂಡನಹಳ್ಳಿ

◆ ಹಣಕ್ಕಿರುವ ಬೆಲೆ ಮನುಷ್ಯನ ಪ್ರಾಣಕ್ಕಿಲ್ಲವಲ್ಲಾ...?

ಇದೆ. ಮಲ್ಟಿಸ್ಪೆಷಾಲಿಟಿ ಹಾಸ್ಪೆಟಲ್‌ನಲ್ಲಿ ಅಳಿ/ಉಳಿಯುವ ಪ್ರತಿ ಪ್ರಾಣದ ಮುಂದೆ ಹಣದ ಮೂಟೆಗಳೇ ಕಸ.

ಪೂರ್ಣಿಮಾ ಮೂರ್ತಿ, ಬೆಂಗಳೂರು

◆ ವೃತ್ತಪತ್ರಿಕೆ/ನಿಯತಕಾಲಿಕೆಗಳ ಹೊರತಾಗಿ ಬರಹಗಳ ಪ್ರಕಟಣೆಗೆ/ಸ್ಪರ್ಧೆಗಳಲ್ಲಿ ಹಣ ಕಳುಹಿಸಲು ತಿಳಿಸುವರಲ್ಲ, ಅದು ಸರಿಯೆ?

ಮಸಾಲೆ ಹಾಕಿ ಅರೆಯುವುದು ಸರಿಯೆ ಎಂದು ಮೀನು ಕೇಳಿದಂತಾಯ್ತು. ಪ್ಯಾರಾಸೈಟ್‌ಗೆ ಆಶ್ರಯವಿತ್ತುದೇ ಆಹಾರ.

ಕೆ.ಎಂ. ಲಿಂಗರಾಜು, ನಂಜನಗೂಡು

◆ ಮಹಾ ಘಟ್ ಬಂಧನ ಯಾರನ್ನು ಹೇಗೆ ಬಂಧಿಸುವುದು?

ಬಂಧನ್ ಯಾವಾಗ ಬೇಕಾದರೂ ಕಟ್ ಆಗುವಂತೆ, ಸಡಿಲವಾಗಿ; ಸ್ವಸಾಮರ್ಥ್ಯದಿಂದ ಗೆಲ್ಲಲು ಆಗದವರನ್ನು.

ಹೇಮಾವತಿ ಜೈನ್, ಹೂವಿನಹಡಗಲಿ

◆ ಪಿಬಿಎಸ್ ಏಕಲವ್ಯ. ಮಹಮದ್ ರಫಿ ದ್ರೋಣಾಚಾರ್ಯ. ನೀವು ಏನು ಸಾರ್?

ಅವರಿಬ್ಬರ ಬತ್ತಳಿಕೆಗಳ ಕಳ್ಳ.

ಎನ್.ಕೆ. ಹೆಬ್ಬಾರ, ಕೋಣೆ

◆ ರಾಮ ಸರಿ; ರಾಮ್ ಯಾಕೆ?

ಅದೇ ಸತ್ಯದ ಪರಮಾವಧಿಯಂತೆ ರಾಮ್ ನಾಮ್ ಸತ್ಯ ಹೈ!

ಎಚ್.ಎಂ. ಅನಂತಪದ್ಮನಾಭ, ಮೈಸೂರು

◆ ಗಡ್ಡ ಬೋಳಿಸಿಕೊಳ್ಳುವುದು ಶೇವಿಂಗೋ, ಸೇವಿಂಗೋ ರಾಂಜೀ?

ನೋಟದ ಸೇವಿಂಗು, ನೋಟುಗಳ ಶೇವಿಂಗು.

## ಬಹುಮಾನಿತ ಪ್ರಶ್ನೆ

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

◆ 'ಆಧುನಿಕ ಫ್ಯಾಷನ್' ಎಂದು ಈ ಹುಡುಗಿಯರು ಎಲ್ಲಿಯತನಕ ಬಟ್ಟೆ ಹರಿದುಕೊಳ್ಳಲು ಸಾಧ್ಯ?

ಹುಡುಗರು ಇನ್ನು ನೋಡಲಾರೆವೆಂದು ಅತ್ತಕಡೆ ತಿರುಗಿಕೊಳ್ಳುವತನಕ.

ರಾಜೀವ ಎನ್. ಮಾಗಲ್, ಸಕಲೇಶಪುರ

◆ ಕದ್ದುಮುಚ್ಚಿ ಇಟ್ಟಿದ್ದ ಕೋಟಿಗಟ್ಟಲೆ ಹಣ ಕನಿಷ್ಠ ನೋಡೋಕಾದರೂ ಸಿಗತ್ತಾ?

ಊಹೂಂ. ಈ ವಿಷಯದಲ್ಲಿ ಅವರದು 4ನೆಯ ಕೋತಿಯ ತತ್ವ, ಕೆಟ್ಟದ್ದನ್ನು ತೋರಿಸಬಾರದು!

ಶೃತಿ ರಿಗ್ರೆಟ್ ಅಯ್ಯರ್, ಬೆಂಗಳೂರು

◆ ರಾಮರಾಜ್ಯವೆಂದು ಅಂದು ಹೇಳುತ್ತಿದ್ದರು. ಈಗ ಏನೆಂದು ಹೇಳಬೇಕು ಅಂಕಲ್?

ಡಬ್ಬಾ ಜನಗಳೇ ಇರುವುದರಿಂದ 'ಡ' ಸೇರಿ ಡ್ರಾಮರಾಜ್ಯ ಆಗಿದೆ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

◆ ಆಕಾಶಕ್ಕೆ ಏಣಿ ಹಾಕಲು ಸಾಧ್ಯವೆ?



ಸಾಧ್ಯ, ಹೆಲಿಕಾಪ್ಟರ್‌ಗಳು ಏಣಿ ಹಾಕುವುದು (ಇಳಿಬಿಡುವುದು) ಆಕಾಶಕ್ಕೇ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

◆ ಪ್ರಾಮಾಣಿಕವಾಗಿ ಇರುವುದು ನನಗೆ ಮುಳ್ಳಾಗುತ್ತಿದೆ. ಏನು ಮಾಡಲಿ ಸರ್?

ವರ–ವಧು ಅನ್ವೇಷಣ ಕೇಂದ್ರ ಆರಂಭಿಸಿ. ಪ್ರಾಮಾಣಿಕತೆ ತಾನಾಗಿಯೇ ಮರೆಯಾಗಿಬಿಡುತ್ತದೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

◆ ತೆಂಗಿನ ಮರ ಬೆಳೆಸಿದರೆ ಎಳನೀರು ಸಿಗುವುದು. ಮಕ್ಕಳನ್ನು ಬೆಳೆಸಿದರೆ?

ಪ್ರತಿ ಮಹಾಲಯ ಅಮಾವಾಸ್ಯೆಯಂದು ತಪ್ಪದೆ ಎಳ್ಳು ನೀರು.

■ ರಾಮ್